**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

**ಎಸ್.ಸಿ ಸಂಖ್ಯೆ 68/2022**

ಫ್ರಾಸಾಃ 10

ಚಾಸಾಃ**22**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ್ |
| ತಂದೆಯ ಹೆಸರು | : | ಲಕ್ಷ್ಮಣ ನಾಯಕ್ |
| ವಯಸ್ಸು | : | 53 ವರ್ಷ |
| ವೃತ್ತಿ | : | AEE, PWD, ಸೋಮವಾರಪೇಟೆ |
| ವಾಸ | : | ಸೋಮವಾರಪೇಟೆ. |

ಸಾಕ್ಷಿಯನ್ನು ದಿನಾಂಕ **09-07-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಕಳೆದ 3 ವರ್ಷಗಳಿಂದ ಸೋಮವಾರಪೇಟೆ PWD ಯಲ್ಲಿ AEE ಆಗಿ ಕರ್ತವ್ಯ ನಿರ್ವಹಿಸುತಿದ್ದೇನೆ.

ದಿನಾಂಕ 26-04-2022 ರಂದು ಶನಿವಾರಸಂತೆ ಪೊಲೀಸರು ಕೋರಿಕೆ ಪತ್ರ ಸಲ್ಲಿಸಿ ಕೃತ್ಯ ನಡೆದ ಜಾಗದ ನಕಾಶೆಯನ್ನು ತಯಾರಿಸಿಕೊಡುವಂತೆ ಕೋರಿದ ಮೇರೆಗೆ ನಾನು ದಿನಾಂಕ 27-05-2022 ರಂದು ಡಿ.ವೈ ಡಿಂಪಲ್ HC-76 ರವರು ಸ್ಥಳವನ್ನು ತೋರಿಸಿದ ಮೇರೆಗೆ ಶಾಂತಪುರಕ್ಕೆ ಹೋಗಿ ಕೃತ್ಯ ನಡೆದ ಸ್ಥಳವನ್ನು ನಕಾಶೆಯನ್ನು ತಯಾರಿಸಿದ್ದೇನೆ. ಈಗ ನಾನು ನೋಡುತ್ತಿರುವ ನಕಾಶೆ ನಾನು ತಯಾರಿಸಿದ್ದ ನಕಾಶೆ ಆಗಿದ್ದು, ಅದನ್ನು ನಿಪಿ-15 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು- **1** ರಿಂದ **3** ನೇ ಆರೋಪಿತರ ಪರವಾಗಿ ಶ್ರೀ ಬಿ.ಡಿ.ಕೆ. ವಕೀಲರಿಂದಃ

ನಕಾಶೆಯನ್ನು ತಯಾರಿಸುವ ಮೊದಲು ಮೂಲ ದಾಖಲಾತಿಗಳನ್ನು ನೋಡಿಲ್ಲ. ದಾಖಲೆಗಳನ್ನು ನೋಡದ ಕಾರಣ ಸದರಿ ಜಾಗ ಸರ್ಕಾರಿ ಜಾಗವೋ ಅಥವಾ ಅದು

ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆಯ ಮೇರೆಗೆ ನಿಪಿ-15 ನ್ನು ಕಛೇರಿಯಲ್ಲಿ ತಯಾರಿಸಿ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಹೋಗಿರಲಿಲ್ಲ ಯಾವುದೇ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ